ಇ) ಇದರಿಂದಾಗಿ ಸಾರ್ವಜನಿಕರಿಗೆ ಹಾಗೂ ರೈತಾಪಿ ವರ್ಗಕ್ಕೆ ಆಗಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ಕಾಮಗಾರಿಯನ್ನು ಎಷ್ಟು ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು?

ಆಲಮಟ್ಟಿ–ಮುದ್ದೇಬಿಹಾಳ ರಸ್ತೆಯ ಕೆಲವು ಭಾಗಗಳಲ್ಲಿ ಗುಂಡಿಗಳು ಬಿದ್ದಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಸದರಿ ರಸ್ತೆಯ ಕನಿಷ್ಟ ದುರಸ್ತಿ ಕೈಗೆತ್ತಿಕೊಳ್ಳುವ ಅವಶ್ಯಕತೆಯನ್ನು ಮನಗಂಡು ರಸ್ತೆಯ ದುರಸ್ತಿಗಾಗಿ ರೂ.11.20 ಲಕ್ಷ ಮೊತ್ತದ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಜುಲೈ–2008ರಲ್ಲಿ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ದುರಸ್ತಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಮತ್ತು ದುರಸ್ತಿ ಕಾಮಗಾರಿಯನ್ನು 2 ತಿಂಗಳ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಮುದ್ದೇಬಿಹಾಳ–ನಾರಾಯಣಪುರ ರಸ್ತೆಯ ಕನಿಷ್ಟ ದುರಸ್ತಿಗಾಗಿ ಬೇಕಾಗುವ ಅಂದಾಜು ವೆಚ್ಚವನ್ನು ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದ್ದು, ಅಂದಾಜು ಪತ್ರಿಕೆ ತಯಾರಿಸಿಕೊಂಡು ನಿಗಮದಡಿ ಲಭ್ಯವಾಗಬಹುದಾದ ಅಗತ್ಯ ಅನುದಾನವನ್ನು ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(362)125**
ಸದಸ್ಯರ ಹೆಸರು	:	**ಶ್ರೀ ಅಪ್ಪಾಸಾಹೇಬ (ಅಪ್ಪು)ಮಲ್ಲಪ್ಪ ಪಟ್ಟಣಶೆಟ್ಟಿ**
ವಿಷಯ	:	**ಬಿಜಾಪುರದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡುವುದು**
ಉತ್ತರಿಸುವವರು	:	**ಮಾನ್ಯ ಕಂದಾಯ ಸಚಿವರು(ಶ್ರೀ ಬಿ.ಕರುಣಾಕರ ರೆಡ್ಡಿ)**

1. ಬಿಜಾಪುರ ನಗರವು ಜಿಲ್ಲಾ ಕೇಂದ್ರವಾಗಿದ್ದು, ಸರ್ಕಾರಿ ಕಛೇರಿ, ಸಂಘ ಸಂಸ್ಥೆಗಳು ಖಾಸಗಿ ಕಟ್ಟಡಗಳಲ್ಲಿ ದುಬಾರಿ ಬಾಡಿಗೆ ನೀಡಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

2. ಹಾಗಿದ್ದಲ್ಲಿ, ಈ ಎಲ್ಲಾ ಸರ್ಕಾರಿ ಕಛೇರಿಗಳು ಒಂದೇ ಕಡೆ ಕಾರ್ಯ ನಿರ್ವಹಿಸುವಂತೆ ವಿಜಾಪುರದಲ್ಲಿ ಮಿನಿ ವಿಧಾನಸೌಧವನ್ನು ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;

ಹೌದು.

3. ಹಾಗಿದ್ದಲ್ಲಿ, ಮಿನಿ ವಿಧಾನಸೌಧ ನಿರ್ಮಿಸಲು ಯಾವ ಸ್ಥಳ ಗುರುತಿಸಲಾಗಿದೆ;

ವಿಜಾಪುರ ತಾಲ್ಲೂಕಿನ ಮಹಾಲಬಗಾಯತ ಗ್ರಾಮದ ರಿ.ಸ.ನಂ.314ರಲ್ಲಿ 5 ಎಕರೆ ಜಮೀನನ್ನು ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದೆ.

4. ಈ ಯೋಜನೆಯು ಈಗ ಯಾವ ಹಂತದಲ್ಲಿದೆ;

ಸದರಿ ಸ್ಥಳದಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ವಹಿಸಲಾಗಿದ್ದು, ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಿ ಪ್ರಸ್ತುತ ನೆಲ ಅಂತಸ್ತಿನ ಕಟ್ಟಡದ ಕೆಲಸವು ಪೂರ್ಣಗೊಂಡಿದ್ದು, ಶೇಕಡಾ 50ರಷ್ಟು ಸ್ಲಾಬ್ ಕೆಲಸ ಮುಕ್ತಾಯಗೊಂಡಿರುತ್ತದೆ. ಈ ಕಟ್ಟಡ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

5. ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉದ್ಭವಿಸುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರ.ಸಂ.	:	(391)127
2. ಸದಸ್ಯರ ಹೆಸರು	:	ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ
3. ಉತ್ತರಿಸುವ ಸಚಿವರ ಹೆಸರು	:	(ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಡಿಯಲ್ಲಿ ಬರುವ ಬೆಣ್ಣೆಹಳ್ಳದ ಹೂಳನ್ನು ತೆಗೆಯಲಾಗಿದೆಯೇ;

ಇಲ್ಲ

ಆ ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು;

40 ಹೆಕ್ಟೇರ್‌ನಿಂದ 2000 ಹೆಕ್ಟೇರ್‌ವರೆಗಿನ ನೀರಾವರಿ ಅಚ್ಚುಕಟ್ಟು ಪ್ರದೇಶವನ್ನು ಸೃಜಿಸುವ ಕೆರೆ/ಬಾಂದಾರ/ಏತ ನೀರಾವರಿ ಯೋಜನೆ, ಮುಂತಾದ ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆಯು ಕೈಗೊಳ್ಳುತ್ತಿದೆ. ಹಳ್ಳಗಳಲ್ಲಿ ಹೂಳು ತೆಗೆಯುವಂತಹ ಕಾಮಗಾರಿಗಳನ್ನು ಕೈಗೊಳ್ಳುತ್ತಿಲ್ಲ. ಆದರೆ, ವಿಶೇಷ ಅನುದಾನ